ಪದಬಂಧ



### ಎಡದಿಂದ ಬಲಕ್ಕೆ

1. ಆರಿಸಿ ಬಂದವನ ಕೈ ತುಂಬ ಏಕಿಂಥ ಹಳದಿ? 4
3. ಆಡಲಿಕ್ಕೆ ಬಂದವರನ್ನು ಕೆಡವಲು ಈ ಕುಸ್ತಿ ಕಣ 3
4. ಮೋಸ ಮಾಡಿದ ಕುಂಬಾರರಿಗೆ ಕಟು ಎಚ್ಚರಿಕೆ 3
6. ಅನ್ನರ ಗುರುತು ಹಚ್ಚುವ ಹೊಣೆಗಾರಿಕೆ ಬಹಳ ದೊಡ್ಡದು 4
7. ಪ್ರವರ ಕೇಳಲೆಂದು ಹೋದವನು ಕಂಡು ಬಂದದ್ದು ಕಡಲು 4
8. ದಾನ ಪಡೆವ ಅವನ ದುರಾಸೆಗೆ ಕಾರಣ ಆತನೊಬ್ಬ ದುಡ್ಡಿನ ಗುಲಾಮ 4
10. ಗಣ್ಯರ ಕೆಲಸಗಳನ್ನೆಲ್ಲ ಮಾಡಿಕೊಡಲು ಹೋದವ ಈತನ ಸ್ನೇಹಿತ 4
12. ತೋರಿಸಲು ಮರೆತವರ ಮನೆಯಲ್ಲಿ ಎಲ್ಲವೂ ಚೆಲ್ಲಾಪಿಲ್ಲಿ 4
14. ಭಾಗ್ಯವಂತನಿಗೂ ಭೋಗವಂತನಿಗೂ ದೇವರಂತೂ ಬೇರೆ ಅಲ್ಲ 4
16. ಗುಡ್ಡ ಹತ್ತಿ ಬಂದವರನ್ನು ಬೆದರಿಸಿದ್ದು ಮಂಗ ಮುಂದಾಳು 3
17. ಮೂರ್ಖರಂತೆ ಕಾಣಲು ಧರಿಸಿದ್ದು ಇದೇ ಬಟ್ಟೆ ಮುಂಡಾಸು 3
18. ಜ್ವರ ನಿವಾರಣೆ ಮಾಡಿದವರಿಗೆ ಗೌರವದ ಕಾಣಿಕೆ 4

### ಮೇಲಿನಿಂದ ಕೆಳಕ್ಕೆ

1. ಅಡವಿಗೂ ಅಪಾಯವಾದೀತು; ಇಲ್ಲೇ ಅವಿಸಿಕೋ 3
2. ಕಣ್ಣೀರು ಬರುವಂತೆ ನೋಯಿಸಿದ್ದು ಉಗುರು 3
3. ಅರ್ಹವಾಗಲು ನೆರವಾಗಬೇಕೆಂದು ಕೋರಿಕೆ 4
5. ರಾಜ್ಯವನ್ನೆಲ್ಲ ಆವರಿಸಿತ್ತು ರೋಗದ ಜೊತೆಗಾರ 3
7. ಪಂಚವಟಿಗೆ ಸಾಗುವ ಹಾದಿಯಲ್ಲೊಂದು ಸೋಪಾನ ಮಾರ್ಗ 4
9. ಸಾಹಸಿಗರು ಹತ್ತಾರು ನೂರು; ನೋಡಲು ಬಂದವರು ನೂರಾರು ಸಾವಿರ 4
11. ಕಳ್ಳನಿಗೆ ನಡುಕ ತಂದದ್ದು ಕಪ್ಪು ಸರ್ಪ 3
13. ನಡೆಸಲು ಬರೀ ಕಾಲು; ಓಡಿಸಲು ಬೀಸುವ ಚಾವಟಿ 4
14. ಬೇವಿನ ಮರಗಳಿಂದ ಸುತ್ತುವರೆದಿದೆ ಭಾರೀ ಭವ್ಯ ಮನೆ 3
15. ಈ ಸುಂದರ ತೋರಣವನ್ನು ಕಟ್ಟಿದವಳು ಒಬ್ಬಳು ಯುವತಿ 3

## 12—01—2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಮನೋಹರ 3. ಕರಾರು 4. ಮಲೆಪು 6. ನೀರಹನಿ 7. ಯದ್ವಾತದ್ವಾ 9. ಕೆಲಕಾಲ 12. ಹಣಬಲ 14. ಗರೀಬ 15. ಹವಳ 16. ಗೆಣೆಕಾರ (ಸ್ನೇಹಿತ)

**ಮೇಲಿನಿಂದ ಕೆಳಕ್ಕೆ**

1. ಮರುದನಿ 2. ರಮಣೀಯ 3. ಕರ್ತಾರ 5. ಪುಲುತ (ತಲುಪು ಹಿಂದು ಮುಂದು) 6. ನೀಹಾರಿಕೆ 8. ದ್ವಾರಪಾಲ 10. ಲವಂಗ 11. ಲಗುಬಗೆ 12. ಹರಿಹರ 13. ಬಹಳ

ಪ್ರಶ್ನಾಂಕಣ

# ಜೋನಾಥನ್ ಯಾರು? ಏಕೆ ಪ್ರಸಿದ್ಧ?

ಜೋನಾಥನ್ ಅದೊಂದು ಆಮೆ. ಅತ್ಯಂತ ದೀರ್ಘಾಯುಷಿಯಾಗಿ ಬದುಕು ನಡೆಸುತ್ತಿರುವ, ಹಾಗಾಗಿಯೇ ವಿಶ್ವ ಪ್ರಸಿದ್ಧವಾಗಿರುವ ಆಮೆ ಅದು! ಕಳೆದ ಡಿಸೆಂಬರ್ 4ರಂದು ಅದರ 190 ನೆಯ ಹುಟ್ಟುಹಬ್ಬವನ್ನು ಆಚರಿಸಲಾಯಿತು! ಭಾರೀ ವೈಭವದಿಂದ ನಡೆದ ಆ ಸಮಾರಂಭದಲ್ಲಿ ಆ ಆಮೆಗೆ ಅತ್ಯಂತ ಪ್ರಿಯವಾದ ಹಣ್ಣು ತರಕಾರಿಗಳನ್ನು ಬಳಸಿ ತಯಾರಿಸಿದ್ದ ವಿಶೇಷ ಕೇಕ್ ಕೊಟ್ಟು ಸಂಭ್ರಮಿಸಲಾಯಿತು.

ಜೋನಾಥನ್ ಒಂದು ದೈತ್ಯ 'ನೆಲವಾಸಿ ಆಮೆ' (ಟಾರ್ಟಸ್). ಅದರ ಪ್ರಭೇದ ನಾಮ ಅಲ್ಡಬ್ರಾಚೆಲಿಸ್ ಜೈಗಾಂಟಿಯಾ ಹೋಲೋಲಿಸ್ಸಾ. ವಾಸ್ತವವಾಗಿ ಸೆಷಲ್ಸ್ ದೈತ್ಯ ಆಮೆಯ (Seychelles Giant Tortoise) ಒಂದು ಉಪ ಪ್ರಭೇದ ಅದು. ಪ್ರಸ್ತುತ ಸೆಷಲ್ಸ್ ದೈತ್ಯ ಆಮೆ ಪ್ರಭೇದವಾಗಲೀ, ಅದರ ಯಾವುದೇ ಉಪ ಪ್ರಭೇದವಾಗಲೀ ಒಂದೇ ಒಂದೂ ನಿಸರ್ಗದಲ್ಲಿ ಉಳಿದಿಲ್ಲ. ಸಾಕು ಪ್ರಾಣಿಯಂತಾದರೂ ಇಷ್ಟು ಕಾಲ ಉಳಿದಿರುವುದೇ ಜೋನಾಥನ್‌ನ ವಿಶೇಷ. ವಿಶ್ವದಾಖಲೆಗಳ ಗಿನ್ನೆಸ್ ಪುಸ್ತಕದ ಪ್ರಕಾರ ಇಡೀ 'ಕಿಲೋನಿಯನ್ ವರ್ಗ'ದಲ್ಲಿ (ಎಂದರೆ, ಟಾರ್ಟಸ್, ಕಡಲಾಮೆ ಮತ್ತು ಟೆರಾಪಿನ್‌ಗಳ ವರ್ಗ) ಜೋನಾಥನ್‌ನದೇ ಗರಿಷ್ಠ ವಯಸ್ಸಿನ ವಿಶ್ವದಾಖಲೆ. ಅಷ್ಟೇ ಅಲ್ಲ, ಜೋನಾಥನ್ ನಷ್ಟು ವಯಸ್ಸಿನ ಬೇರೆ ಯಾವ ನೆಲವಾಸಿ ಪ್ರಾಣಿಯೂ ಧರೆಯಲ್ಲಿಲ್ಲ (ಗರಿಷ್ಠ ವಯಸ್ಸಿನ ವಿಶ್ವದಾಖಲೆಯ ಸಾಗರ ಪ್ರಾಣಿಯಾದ 'ಗ್ರೀನ್ ಲ್ಯಾಂಡ್ ಶಾರ್ಕ್' ಚಿತ್ರ2 ರಲ್ಲಿದೆ; ಅದರ ವಯಸ್ಸು 400 ವರ್ಷ)

ಜೋನಾಥನ್ 'ಸೇಂಟ್ ಹೆಲೆನಾ' ದ್ವೀಪದಲ್ಲಿ ನೆಲೆಸಿದೆ. ಬ್ರಿಟಿಷ್ ಸಾಗರೋತ್ತರ ವಸಾಹತುಗಳಲ್ಲೊಂದಾದ ಈ ದ್ವೀಪ ದಕ್ಷಿಣ ಅಟ್ಲಾಂಟಿಕ್ ಮಹಾಸಾಗರದಲ್ಲಿ ಆಫ್ರಿಕಾ ಖಂಡದ ನೈಋತ್ಯದ ಅಂಚಿನಿಂದ 1,100 ಕಿ.ಮೀ. ದೂರದಲ್ಲಿದೆ. ಕೇವಲ 16 ಕಿ.ಮೀ ಉದ್ದ ಮತ್ತು 10 ಕಿ.ಮೀ ಅಗಲ ಇರುವ ಈ ಪುಟ್ಟ ಜ್ವಾಲಾಮುಖಿ ಜನ್ಯ ದ್ವೀಪದ ಜನ ಸಂಖ್ಯೆ 5,500. ಈ ದ್ವೀಪಕ್ಕೆ 1882ರಲ್ಲಿ (ಆಗ ಜೋನಾಥನ್‌ಗೆ 50 ವರ್ಷ ವಯಸ್ಸು) ಸೆಷಲ್ಸ್ ದ್ವೀಪದಿಂದ ತರಲಾದ ಜೋನಾಥನ್ ಆಗಿನಿಂದಲೂ ಸೇಂಟ್ ಹೆಲೆನಾದ ಗವರ್ನರ್‌ರ ಸರ್ಕಾರಿ ವಸತಿಯ ಸುಂದರ, ಸಸ್ಯ ಸಮೃದ್ಧ, ವಿಶಾಲ ಉದ್ಯಾನದಲ್ಲಿ ಸುರಕ್ಷಿತವಾಗಿ ನೆಲೆಸಿದೆ.




190 ವರ್ಷ ವಯಸ್ಸಿನ ವೃದ್ಧಾಪ್ಯದಿಂದಾಗಿ ಸಹಜವಾಗಿಯೇ ಜೋನಾಥನ್‌ಗೆ ದೃಷ್ಟಿ ಶಕ್ತಿ ಇಲ್ಲ; ವಾಸನಾ ಗ್ರಹಣ ಸಾಮರ್ಥ್ಯವೂ ಇಲ್ಲ. ಆದರೆ ಶ್ರವಣ ಶಕ್ತಿ ಮಾತ್ರ ತುಂಬ ಚುರುಕಾಗಿಯೇ ಉಳಿದಿದೆ. ಸೇಂಟ್ ಹೆಲೆನಾದ ಎಲ್ಲ ಜನರ ಪ್ರೀತಿಯ, ಅಚ್ಚುಮೆಚ್ಚಿನ ಈ ಪ್ರಾಣಿ ಎಷ್ಟು ಅಭಿಮಾನ, ಗೌರವಗಳನ್ನು ಗಳಿಸಿದೆಯೆಂದರೆ ಅಲ್ಲಿ ಈ ಆಮೆಯ ಚಿತ್ರ ಇರುವ ಒಂದು ನಾಣ್ಯ ಚಲಾವಣೆಯಲ್ಲಿದೆ. ಅದರ ಇತ್ತೀಚಿನ ಹುಟ್ಟುಹಬ್ಬದ ದಿನ ಅದರ ಗೌರವಾರ್ಥ ಒಂದು ಅಂಚೆಚೀಟಿ ಕೂಡ ಬಿಡುಗಡೆಗೊಂಡಿದೆ!

■ ಎನ್. ವಾಸುದೇವ್